# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 19.02.2020 ರಂದು ಮಧ್ಯಾಹ್ನ: 3:00 ಗಂಟೆಗೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2019–20ನೇ ಸಾಲಿನ ಎರಡನೇ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಎಲ್.ಪಿ. ರಾಜು,<br>ಡೀನರು, ಕಲಾ ಮತ್ತು ಕಾನೂನು ನಿಕಾಯ | ಸದಸ್ಯರು |
| 3. | ಶ್ರೀ ಶ್ರೀನಿವಾಸ ಆರ್.ಕೆ.<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು,<br>ತುಮಕೂರು ಜಿ.–572137. | ಸದಸ್ಯರು |
| 4. | ಕುಮಾರಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>ಸಂಜಯ್‌ನಗರ, ಬೆಂಗಳೂರು–560094. | ಸದಸ್ಯರು |
| 5. | ಪ್ರೊ. ಬಿ.ಆರ್. ಕೃಷ್ಣಮೂರ್ತಿ, ಪ್ರಾಂಶುಪಾಲರು, ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ಹುಳಿಯಾರು. ಚಿಕ್ಕನಾಯಕನಹಳ್ಳಿ ತಾ. | ಸದಸ್ಯರು |
| 6. | ಪ್ರೊ. ಜಗದೀಶ್ ಎನ್.ಹೆಚ್. ಪ್ರಾಂಶುಪಾಲರು,<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾವಿ, ತುಮಕೂರು ತಾಲ್ಲೂಕು. | ಸದಸ್ಯರು |
| 7. | ಪ್ರೊ. ಶಿವಾನಂದಯ್ಯ ಎನ್.ಪಿ. ಪ್ರಾಂಶುಪಾಲರು,<br>ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾ. | ಸದಸ್ಯರು |
| 8. | ಡಾ. ಆನಂದ ಕುಮಾರಿ, ಪ್ರಾಂಶುಪಾಲರು,<br>ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು. | ಸದಸ್ಯರು |
| 9. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು–572102. | ಸದಸ್ಯರು |
| 10. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009. | ಸದಸ್ಯರು |
| 11. | ಶ್ರೀ ರಾಜು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ,<br>ತಿಪಟೂರು–572201. ತುಮಕೂರು ಜಿಲ್ಲೆ. | ಸದಸ್ಯರು |
| 12. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ,<br>ತುಮಕೂರು–572105. | ಸದಸ್ಯರು |
| 13. | ಪ್ರೊ. ಪಿ. ಪರಮಶಿವಯ್ಯ,<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು<br>ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 14. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15. | ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.



Scanned by CamScanner

ಹಾಜರಾಗದ ಸದಸ್ಯರು

| | | |
|---|---|---|
| 1 | ಶ್ರೀಮತಿ ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ'. 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ,<br>ನಾಗರಭಾವಿ, ಬೆಂಗಳೂರು–560072. | ಸದಸ್ಯರು |
| 2 | ಶ್ರೀಮತಿ ಎಂ.ಎಸ್. ಭವ್ಯ,<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್,<br>ಬೆಂಗಳೂರು–560064. | ಸದಸ್ಯರು |
| 3 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 4 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 7 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 19.02.2020ರ ಬುಧವಾರ ಮಧ್ಯಾಹ್ನ 3:00 ಕ್ಕೆ ನಡೆದ 2019–20ನೇ ಸಾಲಿನ ಎರಡನೇ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ನೂತನವಾಗಿ ನೇಮಕವಾಗಿರುವ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯವರನ್ನು ಎಲ್ಲಾ ಸದಸ್ಯರುಗಳಿಗೆ ಪರಿಚಯಪಡಿಸಲಾಯಿತು.

ಕುಲಸಚಿವರು ಹದಿಮೂರನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ, ವಿವಿಧ ಸಮಿತಿಗಳಿಂದ ಇಲ್ಲಿಯತನಕ ನಡೆದಿರುವ ಕಾರ್ಯಪ್ರಗತಿಯ ಬಗ್ಗೆ ಮಾಹಿತಿಯನ್ನು ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತಂದರು. ತದನಂತರ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚೆ ಹಾಗೂ ನಿರ್ಣಯ ಕೈಗೊಳ್ಳಲಾಯಿತು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | ಪರೀಕ್ಷಾ ವಿಭಾಗ | |
| 1 | 2019–20.ವಿ.ವಿ.ವಿ.ಪ.01 ಪ. ವಿಭಾಗ –01 | ವಿಶ್ವವಿದ್ಯಾನಿಲಯದ ಹದಿಮೂರನೇ ವಾರ್ಷಿಕ ಘಟಿಕೋತ್ಸವಕ್ಕೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ, ರ್‍ಯಾಂಕ್, ಸುವರ್ಣ ಲೇಪಿತ ಬೆಳ್ಳಿ ಪದಕ, ನಗದು ಬಹುಮಾನ ಪಡೆದವರ ವಿಜೇತರ ಪಟ್ಟಿ, ಪಿ.ಹೆಚ್‌ಡಿ ಹಾಗೂ ಡಿ.ಲಿಟ್ ಪದವಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯ ಕುರಿತು. | ಕುಲಸಚಿವರು (ಪರೀಕ್ಷಾಂಗ) ರವರು ವಿಶ್ವವಿದ್ಯಾನಿಲಯದ ದಿನಾಂಕ 25.02.2020ರಂದು ನಡೆಯುವ ಹದಿಮೂರನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳನ್ನು ಪಡೆಯಲು, ನಗದು ಬಹುಮಾನ, ರ್‍ಯಾಂಕ್ ಪಡೆಯುವ ಅಭ್ಯರ್ಥಿಗಳ ಹಾಗೂ ಪಿಹೆಚ್.ಡಿ. ಮತ್ತು ಡಿ.ಲಿಟ್ ಪದವಿಗೆ ಪಡೆಯುವ ಅಭ್ಯರ್ಥಿಗಳ ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತಂದರು. ಹಾಗೂ ದಿನಾಂಕ 20.02.2020 ರಂದು ರ್‍ಯಾಂಕ್, ಸುವರ್ಣ ಲೇಪಿತ ಬೆಳ್ಳಿ ಪದಕ, ನಗದು ಬಹುಮಾನಕ್ಕೆ ಅರ್ಹರಾದ ಹಾಗೂ ಪಿಹೆಚ್.ಡಿ., ಡಿ.ಲಿಟ್ ಪದವಿಗೆ |



ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

Scanned by CamScanner

| | | | |
|---|---|---|---|
| | | | ಅರ್ಹರಾದ ಅಭ್ಯರ್ಥಿಗಳಿಗೆ ವಿವಿಧ ಸೂಚನೆಗಳನ್ನು ನೀಡುವ ಸಂಬಂಧ ಪರೀಕ್ಷಾ ವಿಭಾಗದಲ್ಲಿ ಸಭೆಯನ್ನು ಕರೆದಿರುವ ಬಗ್ಗೆ ಗಮನಕ್ಕೆ ತಂದರು. ಮುಂದುವರೆದು, ಮಾನ್ಯ ಕುಲಪತಿಗಳು ಘಟಿಕೋತ್ಸವದಂದು ಪಾಲಿಸಬೇಕಾದ ಪದ್ಧತಿಯನ್ನು ಸಭೆಯ ಗಮನಕ್ಕೆ ತಂದರು.<br>ವಿಶ್ವವಿದ್ಯಾನಿಲಯದ ಹದಿಮೂರನೇ ವಾರ್ಷಿಕ ಘಟಿಕೋತ್ಸವಕ್ಕೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ, ರ್‍ಯಾಂಕ್, ಸುವರ್ಣ ಲೇಪಿತ ಬೆಳ್ಳಿ ಪದಕ, ನಗದು ಬಹುಮಾನ ಪಡೆದವರ ವಿಜೇತರ ಪಟ್ಟಿ, ಪಿ.ಹೆಚ್‌ಡಿ ಹಾಗೂ ಡಿ.ಲಿಟ್ ಪದವಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಒಪ್ಪಬಹುದು ಹಾಗೂ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಹಾಗೂ ಸಹಿಗಾಗಿ ಮಂಡಿಸಬಹುದು ಎಂದು ವಿದ್ಯಾವಿಷಯಕ ಪರಿಷತ್ ಸಭೆಯು ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>ಮುಂದುವರೆದು, ದಿನಾಂಕ 20.02.2020 ರ ತನಕ ನಡೆಯುವ ಪಿಹೆಚ್.ಡಿ. ಪದವಿಗಳ ಮೌಖಿಕ ಪರೀಕ್ಷೆಗಳನ್ನು ಪರಿಗಣಿಸಿ ಅಂತಹ ಪಿಹೆಚ್.ಡಿ. ಅಭ್ಯರ್ಥಿಗಳನ್ನು ಹದಿಮೂರನೇ ಘಟಿಕೋತ್ಸವದಲ್ಲಿ ಪದವಿಗೆ ಪರಿಗಣಿಸಲು ತೀರ್ಮಾನಿಸಿತು. |
| ಹೆಚ್ಚುವರಿ ಕಾರ್ಯಸೂಚಿಗಳು | | | |
| ಶೈಕ್ಷಣಿಕ ವಿಭಾಗ | | | |
| 2 | 2019–20.ವಿ.ವಿ.ವಿ.ಪ.01 ಶೈಕ್ಷಣಿಕ ವಿಭಾಗ – 01 | B.Sc (Fashion & Apparel Design) ಕೋರ್ಸಿನ ವಿನಿಯಮ, Scheme ಮತ್ತು ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ. | ವಿಶ್ವವಿದ್ಯಾನಿಲಯದಲ್ಲಿರುವ ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳ ಪರಿಚಯವನ್ನು ವಿವಿಧ ಸ್ನಾತಕ ಪದವಿಗಳ ವಿದ್ಯಾರ್ಥಿಗಳಿಗೆ ನೀಡುವ ಸಂಬಂಧ ಮಾರ್ಚ್ ತಿಂಗಳಲ್ಲಿ |



ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

Scanned by CamScanner

| | | | |
|---|---|---|---|
| | | | ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ Know your campus ಎಂಬ ಓಪನ್ ಹೌಸ್ ಅನ್ನು ಆಯೋಜಿಸಲು ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಕುಲಪತಿಗಳ ಸಭೆಯ ಗಮನಕ್ಕೆ ತಂದರು.<br><br>B.Sc (Fashion & Apparel Design) ಕೋರ್ಸಿನ ವಿನಿಯಮ, Scheme ಮತ್ತು ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ಸದರಿ ಕೋರ್ಸಿನ ಪಠ್ಯಕ್ರಮವನ್ನು ಅನುಮೋದಿಸಿತು. ಚಾಲ್ತಿಯಲ್ಲಿರುವ ಸ್ನಾತಕ ಸಿ.ಬಿ.ಸಿ.ಎಸ್. ವಿನಿಯಮದಲ್ಲಿ B.Sc (Fashion & Apparel Design) ಕೋರ್ಸಿಗೆ ಸಂಬಂಧಿಸಿದ ಅಂಶಗಳನ್ನು ಸೇರ್ಪಡಿಸಿ, ತಿದ್ದುಪಡಿ ವಿನಿಯಮವನ್ನು ಅನುಮೋದಿಸಬಹುದೆಂದು ಹಾಗೂ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪಡೆಯಲು ಸರ್ಕಾರಕ್ಕೆ ಮಂಡಿಸಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br><br>ಮುಂದುವರೆದು, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ವಿವಿಧ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳು, ವಿಭಾಗದ ಮುಖ್ಯಸ್ಥರು, ಪ್ರಾಂಶುಪಾಲರುಗಳು, ವಿಷಯ ತಜ್ಞರು, ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸದಸ್ಯರುಗಳು ಸೇರಿ ಒಂದು ಸಭೆಯನ್ನು ನಡೆಸುವುದು ಸೂಕ್ತವೆಂಬ ಅಭಿಪ್ರಾಯವನ್ನು ಒಮ್ಮತದಿಂದ ನೀಡಿತು. |



ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

Scanned by CamScanner

| ಇಂಜಿನಿಯರಿಂಗ್ ವಿಭಾಗ | | | |
|---|---|---|---|
| 3 | 2019-20.ವಿ.ಸಿಂ.02 ಸಾ & ಅ ವಿಭಾಗ -01 | ಡಾ. ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠಕ್ಕೆ ಜಾಗ ನೀಡಲು ಉದ್ದೇಶಿಸಿರುವ ಬಗ್ಗೆ. | ಡಾ. ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠಕ್ಕೆ ಸಂಬಂಧಿಸಿದಂತೆ, ಗಂಗಸಂದ್ರದಲ್ಲಿರುವ 22 ಗುಂಟೆ ಸರ್ಕಾರಿ ಜಾಗವನ್ನು ಡಾ. ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠಕ್ಕೆ ಹಸ್ತಾಂತರಿಸುವಂತೆ ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಜಿ.ಎಸ್. ಬಸವರಾಜು ರವರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದು, ಜಿಲ್ಲಾಧಿಕಾರಿಗಳ ಕಛೇರಿಯ ಕರೆಗೆ ವಿಶ್ವವಿದ್ಯಾನಿಲಯ ಕ್ರಮವಹಿಸಿದೆ ಎಂಬ ಅಂಶವನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಅಧ್ಯಯನ ಪೀಠಕ್ಕೆ ಸರ್ಕಾರಿ ಜಾಗವನ್ನು ಹಸ್ತಾಂತರಿಸುವ ಬಗ್ಗೆ ಇರುವ ಸಾಧಕ ಬಾದಕಗಳನ್ನು ಹಾಗೂ ನೀತಿ ನಿರೂಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸುವ ಬಗ್ಗೆ ತೀರ್ಮಾನಿಸಿತು. |

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

19/2
ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.



Scanned by CamScanner